ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಸ್ವಚ್ಛ ಸುಜಲ ಗ್ರಾಮ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಸ್ವಚ್ಛ ಭಾರತ್ ಮಿಷನ್ (ಗ್ರಾ) ಮತ್ತು ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮಗಳ ಸುಸ್ಥಿರ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಸ್ವಚ್ಛತೆ ಮತ್ತು ಸ್ವಸ್ಥತೆಗೆ ಪ್ರಾಮುಖ್ಯತೆ ನೀಡುತ್ತಿದೆ. ಈ ನಿಟ್ಟಿನಲ್ಲಿ ಇದೀಗ ಗ್ರಾಮಗಳು ಬಯಲು ಶೌಚ ಮುಕ್ತವಾಗಿ, ಸ್ವಚ್ಛತೆಯ ಹಲವು ಮಾನದಂಡದಲ್ಲಿ ತೇರ್ಗಡೆಗೊಂಡಿದ್ದಲ್ಲದೆ, ಈಗ 'ಸ್ವಚ್ಛ ಸುಜಲ ಗ್ರಾಮ'ಗಳಾಗಿ ಹೊರಹೊಮ್ಮುತ್ತಿವೆ.

ಭಾರತ ಸರ್ಕಾರವು ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಅಡಿಯಲ್ಲಿ ಗ್ರಾಮಗಳಲ್ಲಿ ನೈರ್ಮಲ್ಯ ಸಾಧಿಸುವ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯವನ್ನು ಬಲಪಡಿಸುವ ಉದ್ದೇಶದಿಂದ ಸ್ವಚ್ಛ ಸುಜಲ ಗ್ರಾಮ ಉಪಕ್ರಮಕ್ಕೆ ಚಾಲನೆ ನೀಡಿತು. ಸ್ವಚ್ಛ ಸುಜಲ ಗ್ರಾಮ ಎನ್ನುವ ವಿನೂತನ ಪರಿಕಲ್ಪನೆಯು ಸಮುದಾಯಗಳ ODF ಸ್ಥಿತಿ ಹಾಗೂ ಜಲ ಜೀವನ್ ಮಿಷನ್ (JJM) ಕಾರ್ಯಕ್ರಮದ ಮೂಲಕ ಮನೆಮನೆಗೆ ಶುದ್ಧ ಮತ್ತು ಸುರಕ್ಷಿತ ನೀರು ಪೂರೈಕೆ ಮಾಡುವ ವ್ಯವಸ್ಥೆಯನ್ನು ಒಳಗೊಂಡಿದೆ.



# ಸ್ವಚ್ಛ ಸುಜಲ ಗ್ರಾಮ ಘೋಷಣೆಯ ಮಾನದಂಡಗಳು:

ಸ್ವಚ್ಛ ಸುಜಲ ಗ್ರಾಮ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯಕರ ಮತ್ತು ಸ್ವಚ್ಛವಾದ ಪರಿಸರವನ್ನು ಕಲ್ಪಿಸಲು ಹಮ್ಮಿಕೊಂಡಿರುವ ಮಹತ್ವಪೂರ್ಣ ಯೋಜನೆಯಾಗಿದೆ. ಪರಿಸರದ ಪರಿಶುದ್ಧತೆ ಮತ್ತು ಜನರ ಆರೋಗ್ಯವನ್ನು ಸುಧಾರಿಸುವುದಷ್ಟೇ ಅಲ್ಲ, ಗ್ರಾಮಗಳ ಅಭಿವೃದ್ಧಿಯಲ್ಲಿ ಸಹಕಾರಿಯಾಗುವುದಾಗಿದೆ. ಈ ಯೋಜನೆಯಡಿ ಗ್ರಾಮಗಳು ಹಲವು ಪ್ರಮುಖ ಮಾನದಂಡಗಳನ್ನು ಪೂರೈಸಿದರೆ, ಅವು 'ಸ್ವಚ್ಛ ಸುಜಲ ಗ್ರಾಮ' ಎಂದು ಘೋಷಿಸಲ್ಪಡುತ್ತವೆ.



## 01 ಸುರಕ್ಷಿತ ನೀರಿನ ಸರಬರಾಜು ವ್ಯವಸ್ಥೆ:

ಸ್ವಚ್ಛ ಸುಜಲ ಗ್ರಾಮ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯಕರ ಮತ್ತು ಸ್ವಚ್ಛವಾದ ಪರಿಸರವನ್ನು ಕಲ್ಪಿಸಲು ಹಮ್ಮಿಕೊಂಡಿರುವ ಮಹತ್ವಪೂರ್ಣ ಯೋಜನೆಯಾಗಿದೆ. ಪರಿಸರದ ಪರಿಶುದ್ಧತೆ ಮತ್ತು ಜನರ ಆರೋಗ್ಯವನ್ನು ಸುಧಾರಿಸುವುದಷ್ಟೇ ಅಲ್ಲ, ಗ್ರಾಮಗಳ ಅಭಿವೃದ್ಧಿಯಲ್ಲಿ ಸಹಕಾರಿಯಾಗುವುದಾಗಿದೆ. ಈ ಯೋಜನೆಯಡಿ ಗ್ರಾಮಗಳು ಹಲವು ಪ್ರಮುಖ ಮಾನದಂಡಗಳನ್ನು ಪೂರೈಸಿದರೆ, ಅವು 'ಸ್ವಚ್ಛ ಸುಜಲ ಗ್ರಾಮ' ಎಂದು ಘೋಷಿಸಲ್ಪಡುತ್ತವೆ.



## 02 ಬಯಲು ಶೌಚ ಮುಕ್ತತೆ (ODF):

ಗ್ರಾಮವು 'ಬಯಲು ಶೌಚ ಮುಕ್ತ' (Open Defecation Free - ODF) ಸ್ಥಿತಿಯನ್ನು ಕಾಯ್ದುಕೊಂಡಿರಬೇಕು. ಗ್ರಾಮದ ಎಲ್ಲಾ ಮನೆಗಳು ಹಾಗೂ ಸಾರ್ವಜನಿಕ ಸಂಸ್ಥೆಗಳು (ಶಾಲೆ, ಅಂಗನವಾಡಿ, ಗ್ರಂಥಾಲಯ, ಗ್ರಾಮ ಪಂಚಾಯಿತಿ ಕಚೇರಿ) ಸ್ವಚ್ಛ ಹಾಗೂ ಸುರಕ್ಷಿತ ಶೌಚಾಲಯವನ್ನು ಹೊಂದಿರಬೇಕು ಹಾಗೂ ಬಳಸುತ್ತಿರಬೇಕು.



## 03 ದ್ರವ ತ್ಯಾಜ್ಯ ಮತ್ತು ಒಣ ತ್ಯಾಜ್ಯ ನಿರ್ವಹಣೆ:

ಗ್ರಾಮದಲ್ಲಿ ದ್ರವ ಮತ್ತು ಒಣ ತ್ಯಾಜ್ಯ ನಿರ್ವಹಣೆಗೆ ವ್ಯವಸ್ಥೆಗಳಿರಬೇಕು. ಮನೆ ಹಂತದಲ್ಲಿಯೇ ಹಸಿ, ಕಸ ಒಣ ಕಸದ ವಿಂಗಡಣೆ, ಸ್ವಚ್ಛತಾ ವಾಹಿನಿ ಮೂಲಕ ಕಸ ಸಂಗ್ರಹಣೆ, ಮರುಬಳಕೆ, ಬೂದು ನೀರು ನಿರ್ವಹಣೆ, ಸ್ವಚ್ಛ ಸಂಕೀರ್ಣ ಘಟಕ, ಘನತ್ಯಾಜ್ಯ ನಿರ್ವಹಣೆಯ ಮೂಲಕ ತ್ಯಾಜ್ಯದ ಸೂಕ್ತ ನಿರ್ವಹಣೆಗೆ ವ್ಯವಸ್ಥೆಗಳಿರಬೇಕು.



## 04 ದೃಶ್ಯ ಸ್ವಚ್ಛತೆ:

ಒಂದು ಗ್ರಾಮವು ದೃಶ್ಯ ಸ್ವಚ್ಛತೆಯನ್ನು ಹೊಂದಿರಬೇಕು. ಗ್ರಾಮದ ರಸ್ತೆಗಳು, ಸಾರ್ವಜನಿಕ ಸ್ಥಳಗಳು ಮತ್ತು ಇತರ ಎಲ್ಲ ಭಾಗಗಳಲ್ಲಿ ಕಸ, ತ್ಯಾಜ್ಯದ ರಾಶಿ, ಅವ್ಯವ್ಯಸ್ಥೆ ಕಾಣದಂತೆ ಗ್ರಾಮವು ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿರಬೇಕು.



## 05 ODF+ ಮಾದರಿ ಗ್ರಾಮ:

ಬಯಲು ಶೌಚ ಮುಕ್ತ ಸ್ಥಿತಿ, ದ್ರವ ಮತ್ತು ಒಣ ತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಹಾಗೂ ದೃಶ್ಯ ಸ್ವಚ್ಛತೆಯನ್ನು ಹೊಂದುವ ಮೂಲಕ ಆ ಗ್ರಾಮವು ಗ್ರಾಮಸಭೆಯಲ್ಲಿ ODF+ ಮಾದರಿ ಗ್ರಾಮವೆಂದು ಘೋಷಿಸಲ್ಪಿಟ್ಟಿರಬೇಕು.

ಬಯಲು ಬಹಿರ್ದೆಸೆ ಮುಕ್ತಗೊಂಡು, ತ್ಯಾಜ್ಯ ನಿರ್ವಹಣೆ ಘಟಕಾಂಶಗಳನ್ನು ಅಳವಡಿಸಿಕೊಂಡು ಸ್ವಚ್ಛತೆಯಲ್ಲಿ ಮಾದರಿಯಾಗಿರುವ

**ರಾಜ್ಯದ 4,667 ಗ್ರಾಮಗಳನ್ನು ಗುರುತಿಸಿ ಅವುಗಳನ್ನು ಸ್ವಚ್ಛ ಭಾರತ್ ಮಿಷನ್(ಗ್ರಾಮ) ಯೋಜನೆಯಡಿ "ಒಡಿಎಫ್ (ಓಪನ್ ಡೆಫಿಕೇಷನ್ ಫ್ರೀ) ಪ್ಲಸ್ ಮಾದರಿ' ಗ್ರಾಮಗಳೆಂದು ಗುರುತಿಸಲಾಗಿದೆ.**

ಇದರ ಜತೆಗೆ ಜಲಜೀವನ್ ಮಿಷನ್ ಯೋಜನೆಯಡಿ

**ಶೇ.100ರಷ್ಟು ಕಾರ್ಯಾತ್ಮಕ ನಳ ಸಂಪರ್ಕಗಳನ್ನು ಒದಗಿಸುವ ಮೂಲಕ ಸುಮಾರು 4,211 ಗ್ರಾಮಗಳನ್ನು "ಹರ್ ಘರ್ ಜಲ್" ಎಂದು ಘೋಷಿಸಲಾಗಿದೆ.**

**ಈಗ ಇವೆರಡೂ ಯೋಜನೆಗಳನ್ನು ಪೂರ್ಣಗೊಳಿಸಿರುವ ಹಾಗೂ ಸ್ವಚ್ಛತೆಗೆ ಸಂಬಂಧಿಸಿ ಹೆಚ್ಚುವರಿ ಕ್ರಮಗಳನ್ನು ಅನುಷ್ಠಾನಗೊಳಿಸಿರುವ ಗ್ರಾಮಗಳನ್ನು ಗುರುತಿಸಿ ಅವುಗಳ ಸುಸ್ಥಿರತೆ ಕಾಪಾಡುವುದಕ್ಕಾಗಿ**

**"ಸ್ವಚ್ಛ ಸುಜಲ ಗ್ರಾಮ" ವೆಂದು**

**ಘೋಷಿಸುವ ಪ್ರಕ್ರಿಯೆ ನಡೆಯುತ್ತಿದೆ.**

ಈ ಮೂಲಕ ಗ್ರಾಮೀಣ ಭಾಗದಲ್ಲಿ ಸ್ವಚ್ಛತೆ ಕಾಪಾಡುವ ಮತ್ತು ಶುದ್ಧ ಕುಡಿಯುವ ನೀರಿನ ಪೂರೈಕೆ ದಿಸೆಯಲ್ಲಿ ಗ್ರಾಮಗಳಿಗೆ ಮತ್ತೊಂದು ಗರಿ ಸೇರಲಿದೆ. ಒಟ್ಟಿನಲ್ಲಿ ಈಗಾಗಲೇ ಸ್ವಚ್ಛತೆಗಾಗಿ ಅನುಷ್ಠಾನಗೊಳಿಸಲಾದ ಯೋಜನೆ/ ಕಾರ್ಯಕ್ರಮಗಳ ನಿರ್ವಹಣೆ ಸಮರ್ಪಕವಾಗಿ ಮುಂದುವರಿಯಬೇಕು. ಸುಸ್ಥಿರ ಗ್ರಾಮವಾಗಿ ಬೆಳೆಯಬೇಕೆಂಬ ಉದ್ದೇಶದಿಂದ ಹಂತ ಹಂತವಾಗಿ ಗ್ರಾಮಗಳಿಗೆ ಇಂತಹ ಮಾನ್ಯತೆಗಳನ್ನು ನೀಡುವ ಕೆಲಸವಾಗುತ್ತಿದೆ.